**CW : 11**

PW : 9

# ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.61/2017

| | |
|---|---|
| ಸಾಕ್ಷಿದಾರರ ಹೆಸರು | : ಕಿರಣ್ ಕುಮಾರ್ |
| ತಂದೆಯ ಹೆಸರು | : ರಾಮ |
| ಪ್ರಾಯ | : 36 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | : ಇರ್ದೆ ಗ್ರಾಮ |

ದಿನಾಂಕಃ**16.09.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನ್ಯಾಯಾಲಯದ ಸಮಕ್ಷಮ ಹಾಜರಿರುವ ಆರೋಪಿಗಳನ್ನು ತೋರಿಸಿದ್ದು ಸಾಕ್ಷಿ ಅವರು ತನಗೆ ಪರಿಚಯ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-10 ರವರ ಪರಿಚಯ ಇಲ್ಲ. ಸುಮಾರು 10 ವರ್ಷಗಳ ಹಿಂದೆ ನಾನು ದೇರಣ್ಣ ರೈ ಎನ್ನುವವರ ಹತ್ತಿರ ಕೆಲಸಕ್ಕೆ ಹೋಗುತ್ತಿದ್ದೆನು. ಆ ಸಮಯದಲ್ಲಿ ನಾನು ಬೈಲಾಡಿಯ ಸಂಕದ ಹತ್ತಿರ ಒಂದ ಪೋಸ್ಟರ್ ಇದ್ದುದ್ದನ್ನು ನೋಡಿದೆನು. ಅದರಲ್ಲಿ ಏನು ಇತ್ತು ಎಂದು ನಾನು ನೋಡಿಲ್ಲ. ಅದನ್ನು ಅಲ್ಲೇ ಬಿಸಾಡಿದ್ದೇನೆ. ಪೊಲೀಸರಿಗೆ ನಾನು ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಃ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸ.ಸ.ಅ. ರವರಿಂದಃ**

ದಿ.**14.02.2015** ರಂದು ನಾನು ಬೈಲಾಡಿಯ ಪ್ರಕಾಶ್ ರೈ ರವರ ಮನೆಗೆ ಚಾಸಾ-**10** ರವರ ಜೊತೆ ಕೂಲಿ ಕೆಲಸಕ್ಕೆ ಹೋದ ಸಮಯದಲ್ಲಿ ಚಾಸಾ-**10** ನನ್ನಲ್ಲಿ ಒಂದು ಬಿಳಿ ಹಾಳೆಯನ್ನು ನೀಡಿ ಈ ಹಾಳೆಯು ಬೈಲಾಡಿ ಸಂಕದ ಬಳಿ ಅಂಟಿಸಿತ್ತು ಎಂದು ತೋರಿಸಿದನು ಎಂದರೆ ಸರಿಯಲ್ಲ. ನಾನು ಅದನ್ನು ನೋಡಿದಾಗ ಅದರಲ್ಲಿ ಪುತ್ತೂರಿನ ಮಲ್ಲಿಗೆ, ಪೂರ್ಣಿಮಾ ಲೋಕೇಶ್ **9964693453** ಮತ್ತು ರೆಂಜದ ಪಿಂಪ್ ಶಶಿಕಲಾ **9900855704,** ಮಿತ್ತಡ್ಕದ ಪಿಂಪ್ ಪ್ರಸನ್ನ ಜಿ **7760039622** ಎಂದು

ಮುದ್ರಿಸಿ ಅದರ ಕೆಳಗೆ ಒಂದು ಹುಡುಗಿಯ 3 ನಗ್ನ ಚಿತ್ರಗಳು ಹಾಗೂ ಹುಡುಗ ಮತ್ತು ಹುಡುಗಿ ಲೈಂಗಿಕ ಕ್ರಿಯೆ ಮಾಡುತ್ತಿರುವ ಚಿತ್ರವನ್ನು ಬಿಳಿ ಕಾಗದದಲ್ಲಿ ಮುದ್ರಿಸಿತ್ತು ಎಂದರೆ ಸರಿಯಲ್ಲ.

ನಾನು ಆ ಹಾಳೆಯನ್ನು ಇಟ್ಟುಕೊಂಡು ಸಂಜೇ ವೇಳೆ ನನ್ನೊಂದಿಗಿದ್ದ 2 ನೇ ಆರೋಪಿಗೆ ತೋರಿಸಿದಾಗ ಆತನು ನನ್ನ ಮೊಬೈಲ್ ಫೋನ್ ತೆಗೆದುಕೊಂಡು ಅದರಲ್ಲಿ ಆತನಿಗೆ ಬೈಲಾಡಿ ಸಂಕದ ಅಡಿಯಲ್ಲಿ ಸಿಕ್ಕಿದ್ದ ಸಿಮ್ಮನ್ನು ಅದಕ್ಕೆ ಹಾಕಿ ಚಿತ್ರದಲ್ಲಿದ್ದ ಪೂರ್ಣಿಮ ಲೋಕೇಶ್ ಮತ್ತು ಶಶಿಕಲಾ ಎಂಬ ಹೆಸರಿನ ಮುಂದೆ ಇದ್ದ ಮೊಬೈಲ್ ನಂ. ಗಳಿಗೆ ಕರೆಮಾಡಿ ತನ್ನ ಹೆಸರನ್ನು ಹೇಳದೆ ವಾಲ್ ಪೋಸ್ಟರ್ ಹಾಕಿದ್ದೇನೆ, ನಿಮ್ಮ ಎಲ್ಲಾ ವಿಷಯ ಗೊತ್ತಾಗಿದೆ, ನೀವು ಮಾಡಿದ್ದು ಎಲ್ಲಾ ಉಂಟು, ಬೆತ್ತಲೆ ವಾಲ್ ಪೋಸ್ಟರ್ ಉಂಟು ಎಂದು ಹೇಳಿ ಫೋನ್ ಕಟ್ ಮಾಡಿದನು ಎಂದರೆ ಸರಿಯಲ್ಲ. ಈಗ ತಿಳಿದಂತೆ 1 ನೇ ಆರೋಪಿ ದಿ. 13.02.2015ರಂದು ಸದರಿ ಅಶ್ಲೀಲ ಚಿತ್ರ ಹೊಂದಿರುವ ಹಾಳೆಯನ್ನು ಬೈಲಾಡಿ ಸೇತುವೆಯಲ್ಲಿ ಮತ್ತು ಬಸ್ಸು ತಂಗುದಾಣದಲ್ಲಿ ಅಂಟಿಸಿರುವುದಾಗಿ ತಿಳಿದುಕೊಂಡಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಪೂರ್ಣಿಮಾಳ ಮೇಲೆ ವರ್ಣರಂಜಿತ ಆಪಾದನೆಗಳನ್ನು ಮಾಡಿ ತನ್ನ ಹೆಸರನ್ನು ನಮೂದಿಸದೇ ಬೇರೆಯವರ ಹೆಸರಿನಲ್ಲಿ ಪತ್ರದ ಮೂಲಕ ಮತ್ತು ಮೆಮೋರಿ ಕಾರ್ಡ್ ನ ಮೂಲಕ ಸಂದೇಶಗಳನ್ನು ಅಂಚೆ ಮೂಲಕ ರವಾನಿಸಿ ಲೋಕೇಶನ ಪತ್ನಿ ಪೂರ್ಣಿಮಾಳಿಗೆ ಅವಮಾನಿಸಿದ್ದಾಗಿದೆ ಎಂದರೆ ಸರಿಯಲ್ಲ. 1 ನೇ ಆರೋಪಿಯನ್ನು ನೋಡಿದ್ದು ಅತನನ್ನು ಮುಂದಕ್ಕೆ ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆಯನ್ನು ನೀಡಿದ್ದೆನು ಎಂದರೆ ಸರಿಯಲ್ಲ. ತನಿಖಾಧಿಕಾರಿಯವರ ಮುಂದೆ ನನಗೆ ಈಗ ಓದಿ ಹೇಳಿದಂತೆ ದಿ.15-10-2015 ರಂದು "ನಾನು ಮೇಲಿನ ವಿಳಾಸದಲ್ಲಿ - - - ಸಾಮಗ್ರಿಗಳನ್ನು ಪೂರ್ಣಿಮಾರವರಿಗೆ ಕಳುಹಿಸಿರುವುದಾಗಿದೆ." ಎಂದು ಹೇಳಿಕೆಯನ್ನು ನೀಡಿದ್ದನು ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ-13 ಎಂದು ಗುರುತಿಸಲಾಯಿತು. ಆರೋಪಿತರು ನನ್ನ ಪರಿಚಯದವರಾದ ಕಾರಣ ಅವರನ್ನು ಶಿಕ್ಷೆಯಿಂದ ಪಾರು ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ

ಏನೂ ಇರುವುದಿಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.

**CW : 11**

PW : 9